ಶಾಲೆಯನ್ನು ಮಂಜೂರು ಮಾಡಿದ್ದೇವೆ. ಇದರ ಪ್ರಕಾರ 1973-74ರ ಸಾಲಿನಲ್ಲಿ 137 ಗ್ರಾಮಗಳಿಗೆ ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಿದೆ. ಸಂಸ್ಥಾನಾದ್ಯಂತ ಈ ಒಂದು ಜಾನುವಾರು ಗಣತಿಯನ್ನು ಲೆಕ್ಕದಲ್ಲಿ ಇಟ್ಟು ಕೊಂಡು ಮೂರರಿಂದ ಐದು ಮೈಲಿ ಘಾನಲೆಯೊಳಗೆ 10-15 ಸಾವಿರ ಜಾನುವಾರು ಜನಸಂಖ್ಯೆ ಇರುವ ಕಡೆ ಪಶುವೈದ್ಯ ಶಾಲೆಯನ್ನು ಮಂಜೂರಾತಿ ಮಾಡಿದೆ.

ಶ್ರೀ ಬಿ. ಜಿ. ಬಣಕಾರ್ :—ಅನೇಕ ಜಾನುವಾರು ಆಸ್ಪತ್ರೆಗಳಲ್ಲಿ ಔಷಧಿ ಒದಗಿಸುವ ಬಗ್ಗೆ ಯಾವ ಏರ್ಪಾಡು ಮಾಡಿದ್ದೀರಿ ?

ಶ್ರೀ ಎನ್. ಚಿಕ್ಕೇಗೌಡ :—ಆಸ್ಪತ್ರೆಗಳು ಕೊಟ್ಟಮೇಲೆ ಔಷಧಿಗಳನ್ನು ಒದಗಿಸುವುದಕ್ಕೆ ಕ್ರಮ ತೆಗೆದುಕೊಂಡು ಕಳೆದ ವರ್ಷದೊಳಗೆ 18 ಲಕ್ಷ ರೂಪಾಯಿ ಗಳನ್ನು ಔಷಧಿಗಾಗಿ ಒದಗಿಸಿದೆ.

SELECTION GRADE TO HEAD CONSTABLES

132. SRI G. PUTTASWAMY (Mudigere).— Will the Chief Minister be pleased to state :

(a) Whether it has come to the notice of the Government that Police Constables in the scale of Rs. 80-3-110-4-130-6-170 are given Selection Grade, after completion of 12 years in the rank of the Head Constable, as per Government Order,

(b) Whether it has come to the notice of the Government that the Head Constables of the Police Department who have been holding the scale of II Dn. Clerk, *i.e.*, Rs. 90-4-110-5-170-EB-6-200 have not been given the Selection Grade even though the Head Constables have completed more than 10 years of service,

(c) Whether Government intend to consider provide Selection Grade to the Head Constables who have completed 10 years of service in Chickmagalur District who are holding the scale of II Dn. Clerks ?

SRI D. DEVARAJ URS (Chief Minister) :

(a) Government, in their order No. HD 37 SRP (1) dated 17-4-1971 have sanctioned selection time scales of pay for grade-1 and grade-2 posts subject to certain conditions specified in the order. Police constables who are in the pay scale of Rs. 80-145 come under the category of grade 2 posts.

(b) Yes

(c) This is under examination

ಶ್ರೀ ಬಿ. ಪುಟ್ಟಸ್ವಾಮಿ.—(ಅ) ಪ್ರಶ್ನೆಗೆ ಉತ್ತರವಾಗಿ ಸರಕಾರ ಅದೇಶ ದಲ್ಲಿರುವ ಕೆಲವು ಷರತ್ತಿಗೊಳಪಟ್ಟು ಎಂದಿದೆ ಆ ಷರತ್ತು ಯಾವುದೆಂಬುದನ್ನು ಹೇಳುತ್ತಿರಾ ?

†ಶ್ರೀ ಡಿ. ದೇವರಾಜ ಅರಸ್.—ಜಿ. ಒ. ನಂ. ಎಚ್ ಡಿ 37 ಎಸ್ ಆರ್ ಪಿ (1 ತಾರೀಖು 17-4-71 ಹಣಕಾಸಿನ ಇಲಾಖೆಯಿಂದ ಹೊರಟಿರುವುದು, ಅದು ಗೆಜೆಟ್ಟಿನಲ್ಲಿ ಪಬ್ಲಿಷ್ ಆಗಿದೆ, ತಮಗೆ ಗೆಜೆಟ್ ಬರುತ್ತದೆ, ಅದರಲ್ಲಿ ನೋಡ ಬಹುದು.

ಶ್ರೀ ಬಿ. ಪುಟ್ಟಸ್ವಾಮಿ.—(ಇ) ಪ್ರಶ್ನೆಗೆ ಉತ್ತರವಾಗಿ ಪರಿಶೀಲನೆಯಲ್ಲಿದೆ ಎಂದು ತಿಳಿಸಲಾಗಿದೆ. ಪರಿಶೀಲನೆ ವಿವರ ತಿಳಿಸುವಿರಾ ?

ಶ್ರೀ ಡಿ. ದೇವರಾಜ ಅರಸ್.—ಹಣದ ಹಂತರದಲ್ಲಿದೆ

ಶ್ರೀ ಬಿ. ಪುಟ್ಟಸ್ವಾಮಿ.—ಜಾಗ್ರತೆ ಪ್ರಮೋಷನ್ ಕೊಡುವ ವ್ಯವಸ್ಥೆ ಮಾಡುವಿರಾ ?

ಶ್ರೀ ಡಿ. ದೇವರಾಜ ಅರಸ್.—ಕೊಡಬೇಕೆಂಬ ಅಭಿಪ್ರಾಯವಿದೆ, ನಮಗೆ ಹಣ ಈ ಸಲ ಸಾಲುವುದಿಲ್ಲ ಎಂದು ನಿಲ್ಲಿಸಿದೆ, ಮುಂದಿನ ಹಣಕಾಸಿನ ವರ್ಷದಲ್ಲಿ ಪರ್ಯಾಲೋಚನೆ ಮಾಡುತ್ತೇವೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು ಮುಗಿದವು